ಮುಟ್ಟಿ 'ಫೀಲ್' ಮಾಡಿದೆ. ಮಧ್ಯಾಹ್ನ ಆಗುತ್ತಾ ಬಂತು. ಮತ್ತೊಮ್ಮೆ ಊಟಕ್ಕೆ ಏಳಲು ಬಲವಂತ ಮಾಡಿದರು. ದಮ್ಮಯ್ಯ ಹೇಳಿ ಹೊರಟು ಬಂದೆ.

ಮಾರನೆಯ ದಿನ ಸಿದ್ಧರಾಜು ಹತ್ತಿರ ಸಂಕ್ಷಿಪ್ತವಾಗಿ – ಅವರ ಮನೆಗೆ ಹೋದದ್ದು ಮುಚ್ಚಿಟ್ಟು – ಹೇಳಿದೆ. 'ನಿನಗೆ ಇನ್ನೊಂದು ವಿಷಯ ಗೊತ್ತಾ?!' ಎಂದು ಸಿದ್ಧರಾಜು ಕುತೂಹಲ ಹುಟ್ಟಿಸಿದರು. ಸುಂದರ್ ಸರ್‌ಗೆ ಕೊಲೀಗ್ ಒಬ್ಬರ ಜೊತೆ ಅಫೇರ್ ಇತ್ತಂತೆ. ಅಫೇರ್ ಅಂದರೆ ತಪ್ಪಾಗಿ ತಿಳಿಯಬಾರದು. ಮದುವೆಯಾಗುವ ಯೋಚನೆ ಇಟ್ಟುಕೊಂಡಿದ್ದ ಪ್ರೇಮಿಗಳು ಎನ್ನಬಹುದು. ಆಕೆಯೂ ಇಂಗ್ಲಿಷ್ ಡಿಪಾರ್ಟ್‌ಮೆಂಟೇ ಅಂತೆ. ಸುರೇಖಾ ಶೆಟ್ಟಿಯೋ ಏನೋ ಹೆಸರು. ಮಸ್ತಾಗಿದ್ದರಂತೆ ನೋಡೋಕೆ. ಇಡೀ ಕಾಲೇಜು ಅವರು ಮದುವೆಯಾಗ್ತಾರಂತಲೇ ಮಾತಾಡುತ್ತಿತ್ತಂತೆ. ಏನು ಕರ್ಮವೋ ಏನು ಕಥೆಯೋ ಆಕೆ ಬೇರೆ ಯಾರನ್ನೋ ಮದುವೆಯಾದರಂತೆ. ಆಮೇಲೆ ಕೆಲಸಾನೂ ಬಿಟ್ಟರಂತೆ. ಗಂಡ ಫಿಲ್ಮ್ ಪ್ರೊಡ್ಯೂಥರ್ ಅಂತ ಹೇಳ್ತಾರಪ್ಪಾ.'

'ಇದೆಲ್ಲ ನಿಮಗೆ ಯಾರು ಹೇಳಿದ್ರು?'

'ಕ್ಯಾಂಟೀನ್ ಇರೋದು ಏನಕ್ಕೆ!' ಸಿದ್ಧರಾಜು, ಹೋಗ್ಗೋ ಹೋಗ್ಗೋ ಕೆಲಸ ನೋಡು ಎನ್ನುವಂತೆ ನಕ್ಕರು.

'ಆಮೇಲೆ ಮುಂದೇನಾಯಿತು?'

ವಿಡೋ ಒಬ್ಬರನ್ನು ಮದುವೆಯಾದುದು ಅಂತಾರಪ್ಪಾ. ಆಗಲೇ ಆಕೆಗೆ ಒಂದು ಮಗು ಇತ್ತು ಅಂತಾರೆ. ಇವರು ಆ ಮಗುವನ್ನೂ ಒಪ್ಪಿಕೊಂಡು ಮದುವೆಯಾದರಂತೆ. ಈ ಭಾಗ ಮಂದಾಕಿನಿ ಯಾಕೆ ಹೇಳಲಿಲ್ಲ ಎಂದು ನನಗೆ ಆಶ್ಚರ್ಯವಾಯಿತು. ಆಮೇಲೆ ಅನ್ನಿಸಿತು: ಎಲ್ಲರ ಬಳಿಯೂ ಎಲ್ಲ ಕುಟುಂಬ ಕಥೆಗಳನ್ನು ಹೇಳಲಾದರೂ ಶಕ್ಯವೆ?

ಇದಾದ ಮೂರನೆಯ ದಿನ ಮಂದಾಕಿನಿ ಒಂದು ಕೈ ಚೀಲ ಹಿಡಿದು ಬಂದವಳು ಅದನ್ನು ನನ್ನ ಮುಂದೆ ಇಟ್ಟು, 'ಇದರಲ್ಲಿ ನಮ್ಮ ತಂದೆ ಹೋಗುವ ಮುನ್ನ ಬರೆದ ಬರಹಗಳಿವೆ. ಇದನ್ನೆಲ್ಲ ಕಟ್ಟಿ ಅಟ್ಟದ ಮೇಲೆ ಜಾಗ ಮಾಡಿ ಇಟ್ಟಿದ್ದೆವು. ನಮ್ಮ ತಂದೆಯ ಬರಹಗಳ ಬಗ್ಗೆ ನೀವು ತೋರಿಸಿದ ಆಸಕ್ತಿ ನೋಡಿ ನಿಮಗೆ ಇದನ್ನು ಕೊಡಬೇಕೆಂದು ಅನಿಸಿತು' ಎಂದಳು.

ರಾತ್ರಿ ಊಟ ಮಾಡಿ ಅದನ್ನು ತೆಗೆದು ನೋಡಿದೆ. ಅದರಲ್ಲಿ ಕೆಲವು ಡೈರಿಗಳಿದ್ದವು. ಉದ್ದನೆಯ ಹಾಳೆಗಳಲ್ಲಿ ಕೆಲವು ವ್ಯಕ್ತಿಚಿತ್ರಗಳನ್ನು ಬರೆದಿದ್ದರು. ಡೈರಿಗಳಲ್ಲಿ ದೈನಂದಿನ ವಿವರಗಳು ಇಡಿಕಿರಿದಿದ್ದವು. ಮಾಸಲು ಬಣ್ಣಕ್ಕೆ ತಿರುಗಿದ್ದ ಕಂತೆಯೊಂದು ಮಡಚಿದ ಸ್ಥಿತಿಯಲ್ಲಿತ್ತು. ಹಿಸಿದು ಹೋಗದ ಹಾಗೆ ಉಪಾಯವಾಗಿ ಬಿಡಿಸಿ ನೋಡಿದೆ. 'ದಗಾ' ಎಂಬ ಶೀರ್ಷಿಕೆ ಕೊಟ್ಟು ಕೆಂಪು ಬಣ್ಣದಲ್ಲಿ ಅಡಿಗೆರೆ ಹಾಕಲಾಗಿತ್ತು.

ಅದು ಸಣ್ಣಕತೆಯಂತೆ ಆರಂಭವಾಗಿತ್ತು.

ಶಿವಶಂಕರ ಚಿಕ್ಕಂದಿನಲ್ಲೇ ತಂದೆಯನ್ನು ಕಳೆದುಕೊಂಡಿದ್ದ. ಅವನ ತಾಯಿಯ ತಾರುಣ್ಯ ಊರ ಅಪಾಪೋಲಿ ಗಂಡಸರಲ್ಲಿ ಕಾರುಣ್ಯ ಹುಟ್ಟಿಸುತ್ತಿತ್ತು. ಅವಳು ನೆರಳಿಲ್ಲದೆ ಎಷ್ಟು ದಿನ ಒಣಗಿಯಾಳು. ಹೊಟ್ಟೆ, ಹೊಟ್ಟೆಯ ಮಗ ಎರಡಕ್ಕೂ ದಾರಿಯೇನು ಎಂದು ಚಿಂತಿಸುತ್ತಿದ್ದಳು. ಒಮ್ಮೆ ಜಾರಿದರೆ ಅದು ಮತ್ತೆ ಮತ್ತೆ ಜಾರಿಸುತ್ತಲೇ ಇರುತ್ತದೆ. ಊರಿನ ಗರತಿ ಹೆಂಗಸರು ಇವರ ಮನೆ ಮುಂದೆ ಜಮಾಯಿಸಿ ಶಾಪ ಹಾಕಿ ಮಣ್ಣು ತೂರುತ್ತಿದ್ದರು. ಶಿವಶಂಕರ ಸ್ಕೂಲಿಗೆ ಹೋಗಲಾರಂಭಿಸಿದ ಮೇಲೆ ಹುಡುಗರು ಹೇಳುವ ನಾನಾ ಕತೆಗಳು ಅವನಲ್ಲಿ ಭಯ–ಜಿಗುಪ್ಸೆ ಹುಟ್ಟಿಸುತ್ತಿದ್ದವು. ಒಂದು ಮಧ್ಯಾಹ್ನ ಸ್ಕೂಲಿಂದ ನೇರವಾಗಿ ಮನೆಗೆ ಬಂದವನು ಬಾಗಿಲು ದಬದಬ ತಟ್ಟಿದ. ಕಿಟಕಿಯಿಂದ 'ಯಾರು? ಎಂದು ಅವನ ತಾಯಿ ಕೇಳಿದಳು. 'ನಾನು!' ಇವನ ಮಾತಲ್ಲಿ ರೂಕ್ಷತೆ ಒಡೆದು ಒಸರುತ್ತಿತ್ತು. ಅವಳಿಗೆ ಬಾಗಿಲು